ಶ್ರೀ ಡಿ.ಎ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ದಿನಾಂಕ 13.7.2000 ದಂದು ನೀರಿನ ದರಗಳನ್ನು ಸರ್ಕಾರವು ಪರಿಷ್ಕರಿಸಿದೆ ಎಂದು ಹೇಳಿದ್ದೀರಿ. ನೀರಿನ ದರ ಪರಿಷ್ಕರಣೆಗೆ ಖಂಡಿತವಾಗಿ ನಮ್ಮ ವಿರೋಧ ಇಲ್ಲ. ನಿನ್ನೆ ತಾನೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ರೀತಿಯಲ್ಲಿ ನಾವು ಯಾವುದೇ ಒಂದು ಇನ್‌ವೆಸ್ಟ್‌ಮೆಂಟ್ ಮಾಡುವಾಗ ಕನಿಷ್ಟ ಮೇಂಟೆನೆನ್ಸ್ ಆದರೂ ಬರುವಂತಹದಕ್ಕೆ ವ್ಯವಸ್ಥೆಗಳು ಇರಬೇಕು. ಇಲ್ಲದಿದ್ದರೆ ಯಾವುದೇ ಕೆಲಸಗಳನ್ನು ಮಾಡಲಿಕ್ಕೆ ಕಷ್ಟ ಆಗಬಹುದು. ಆದರೆ ನನಗೆ ತಿಳಿದ ಪ್ರಕಾರ ಸುಮಾರು 1985ನೇ ಇಸವಿಯ ನಂತರ ಯಾವುದೇ ವರ್ಷದಲ್ಲಿ ಕೂಡ ಇದರ ಪರಿಷ್ಕರಣೆ ಮಾಡಲಿಲ್ಲ. ಬಹುಶಃ ವರ್ಷಕ್ಕೊಮ್ಮೆ ಅಥವಾ ಎರಡು ವರ್ಷಗಳಿಗೆ ಒಮ್ಮೆ ಹಂತ ಹಂತವಾಗಿ ಇದರ ಪರಿಷ್ಕರಣೆ ಮಾಡಿದರೆ ಅದು ಏಕಾಏಕಿ ಪರಿಷ್ಕರಣೆ ಎಂದು ಆಗುವುದಿಲ್ಲ. ಪ್ರಾಯಶಃ ಈಗ 13.7.2000ರನ್ವಯ ನೀರಿನ ದರ ಪರಿಷ್ಕರಣೆ ಮಾಡಿದೆ ಎಂದು ಹೇಳಿದೆ. ಇದು ಒಮ್ಮೆಲೇ ಪರಿಷ್ಕರಣೆ ಮಾಡುತ್ತಿರುವುದರಿಂದ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಏಕೆ ಈ ರೀತಿ ಮಾಡಲಾಗಿದೆ? ಯಾವುದಾದರೂ ಒಂದು ಹಂತ ಹಂತವಾಗಿ ಪರಿಷ್ಕರಣೆ ಮಾಡದಿರುವುದಕ್ಕೆ ಕಾರಣ ಏನು?

ಶ್ರೀ ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಈ ಒಂದು ನೀರಿನ ದರದ ಬಗ್ಗೆ ಈಗಾಗಲೇ ಕ್ಯಾಬಿನೆಟ್ ಸಬ್-ಕಮಿಟಿ ಕೂಡ ಇದ್ದು ಅದರಲ್ಲಿ ಬಹಳಷ್ಟು ಚರ್ಚೆಯನ್ನು ಮಾಡಿ ನಂತರ ನೀರಿನ ದರವನ್ನು ಏರಿಸಲಾಗಿದೆ. ನೀರಿನ ದರವನ್ನು ಏರಿಸತಕ್ಕ ವಿಚಾರ ಕೂಡ ಈಗ ಹಾಲಿ ಇರತಕ್ಕ ಪರಿಸ್ಥಿತಿಗೆ ನೀರಿನ ದರವನ್ನು ಏರಿಸಿರಲಿಲ್ಲ. 1988ರಲ್ಲಿ ಪರಿಷ್ಕರಣೆ ಮಾಡಿದಾಗ ಆ ಸಂದರ್ಭಕ್ಕೆ ಏನಾಗುತ್ತಿತ್ತೋ ಆ ಪ್ರಮಾಣದಲ್ಲಿ ಏರಿಸಿದೆ. ಅಲ್ಲಿಂದ ಇಲ್ಲಿಗೆ ಅಂದರೆ 1983ನೇ ಇಸವಿಯಿಂದ 2001ನೇ ಇಸವಿಯವರೆಗೆ ಯಾವುದೇ ನೀರಿನ ದರವನ್ನು ಏರಿಸಿಲ್ಲ. ಅಲ್ಲಿ ಸ್ವಾಭಾವಿಕವಾಗಿ ಯಾವುದೇ ರೀತಿಯಲ್ಲಿ ಒಂದೇ ಸಾರಿ ಜಂಪ್ ಆಗದೇ ಇರುವ ರೀತಿಯಲ್ಲಿ ಇದನ್ನು ಏರಿಸಲು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಹಾಗಾಗಿ ಈಗ ಕೊಟ್ಟಿರತಕ್ಕ ನೀರಿನ ದರ ಕೂಡ ಬಹಳಷ್ಟು ಒಂದೇ ಸಾರಿಗೆ ಏರಿಸಿರತಕ್ಕದ್ದು ಅಲ್ಲ. ಬೇರೆ ಹೊರ ರಾಜ್ಯಗಳಿಗೆ ಇದನ್ನು ತುಲನೆ ಮಾಡಿದರೆ ಇದು ಬಹಳ ಕಡಿಮೆ ಇದೆ. ಹಾಗಾಗಿ ಅದರಲ್ಲಿ ಯಾವುದೇ ತರಹದ ಒಂದು ಬಹಳ ದೊಡ್ಡ ವ್ಯತ್ಯಾಸ ಕೂಡ ನಾವು ಕಾಣುವುದಿಲ್ಲ.

ಉತ್ತರಹಳ್ಳಿ ಕ್ಷೇತ್ರದ ಈಜಿಪುರದಲ್ಲಿ ಒಳಚರಂಡಿ ವ್ಯವಸ್ಥೆ

335(3724)

ಶ್ರೀ ಅಂಜನಮೂರ್ತಿ(ನೆಲಮಂಗಲ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಉತ್ತರಹಳ್ಳಿ ಕ್ಷೇತ್ರದ ಈಜಿಪುರದಲ್ಲಿ ಸೂಕ್ತ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸೂಕ್ತ ಹಾಗೂ ವೈಜ್ಞಾನಿಕ ಒಳಚರಂಡಿ ವ್ಯವಸ್ಥೆ ಯಾವಾಗ ಮಾಡಲಾಗುವುದು?

ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಯವರು):

ಅ) ಈಜಿಪುರವು ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶವಾಗಿರುತ್ತದೆ. ಈ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದ ನಂತರ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಈಗಾಗಲೇ ಈಜಿಪುರ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ನಿರ್ಮಿಸುವ ಕಾಮಗಾರಿ ಕೆಲಸವನ್ನು ಜಲ ಮಂಡಳಿಯು ಬೆಂಗಳೂರು ಮಹಾನಗರ ಪಾಲಿಕೆಯ ಠೇವಣಿ ಕೊಡುಗೆ ರೀತ್ಯ ಕೈಗೆತ್ತಿಕೊಂಡಿರುತ್ತದೆ. ಈಜಿಪುರದ ಆಂತರಿಕ ಒಳಚರಂಡಿ ವ್ಯವಸ್ಥೆಗಾಗಿ ಜಲ ಮಂಡಲಿಯು ಅಂದಾಜುಗಳನ್ನು 156.85 ಲಕ್ಷ ರೂ.ಗಳ ಮೊತ್ತಕ್ಕೆ ಮಂಜೂರು ಮಾಡಿದ್ದು ಈ ಬಾಬ್ತಿನಲ್ಲಿ ಮಹಾನಗರ ಪಾಲಿಕೆಯು ಇದುವರೆಏಗೂ 60.04 ಲಕ್ಷ ರೂ.ಗಳನ್ನು ಠೇವಣಿ ಮಾಡಿರುತ್ತದೆ. ಆದಾಗ್ಯೂ ಜಲ ಮಂಡಲಿಯು ಕಾಮಗಾರಿ ಕೆಲಸವನ್ನು ಕೈಗೊಂಡು ಶೇ.95 ಭಾಗದಷ್ಟು ಒಳ ಚರಂಡಿ ವ್ಯವಸ್ಥೆಯನ್ನು ನಿರ್ಮಿಸಿರುತ್ತದೆ. ಉಳಿದ ಕೆಲಸವನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಲಾಗುವುದು. ಮುಂದುವರಿದಂತೆ ಈ ಪ್ರದೇಶವು ಅತಿ ತಗ್ಗಿನಲ್ಲಿರುವುದರಿಂದ ಒಳಚರಂಡಿ ವ್ಯವಸ್ಥೆಯಿಂದ ಹರಿದು ಬರುವ ಕೊಳಚೆ ನೀರನ್ನು ಶುದ್ಧೀಕರಣ ಘಟಕಕ್ಕೆ ಕೊಂಡೊಯ್ಯುವ ಮುಖ್ಯ ಕೊಳವೆಗೆ ಪಂಪ್ ಮಾಡುವ ಪ್ರಸ್ತಾವನೆಯನ್ನು ಜಲಮಂಡಳಿಯು ಪರಿಶೀಲಿಸುತ್ತಿದ್ದು ಇದಕ್ಕೆ ಸೂಕ್ತ ಸ್ಥಳ ದೊರೆತ ಕೂಡಲೇ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಅಂಜನಮೂರ್ತಿ: ಮಾನ್ಯ ಅಧ್ಯಕ್ಷರೆ, ಈ ಭಾಗದಲ್ಲಿ ವಾಸ ಮಾಡತಕ್ಕ ಜನಗಳಲ್ಲಿ ಹೆಚ್ಚಿನ ಭಾಗ ಒಳ್ಳೆಯ ನಾಗರೀಕರು ಇದ್ದಾರೆ. ಅಂದರೆ ವಿದ್ಯಾವಂತರು ವಾಸ ಮಾಡತಕ್ಕಂಥ ಜಾಗ, ಅಧಿಕಾರಿಗಳೂ ವಾಸ ಮಾಡತಕ್ಕಂಥ ಜಾಗ. ಅಲ್ಲಿ

ಚರಂಡಿ ವ್ಯವಸ್ಥೆ ಇಲ್ಲದ ಸೊಳ್ಳೆಗಳ ಕಾಟ ಮತ್ತಿತರ ಕಾಟದಿಂದ ರೋಗರುಜಿನ ಹೆಚ್ಚಾಗಿ ಜನಗಳು ಬಹಳ ಬವಣೆ ಪಡುತ್ತಿದ್ದಾರೆ. ಅದಕ್ಕಾಗಿ ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ಆದಷ್ಟು ಜಾಗ್ರತೆ ಆ ಏರಿಯಾದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಶುದ್ಧವಾದ ಆರೋಗ್ಯ ನೈರ್ಮಲ್ಯವನ್ನು ಕಾಪಾಡುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳುವರೇ?

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಈಗಾಗಲೇ 95 ಪರ್ಸೆಂಟ್ ಕೆಲಸ ಮುಗಿದಿದೆ. ಇನ್ನೂ ಐದು ಪರ್ಸೆಂಟ್ ಕೆಲಸ ಆಗಬೇಕಾಗಿದೆ. 1999ನೇ ಇಸವಿಯಲ್ಲಿ ಇದರ ಕಾಮಗಾರಿ ಪ್ರಾರಂಭವಾಯಿತು. ಇನ್ನು 5 ಪರ್ಸೆಂಟ್ ಕೆಲಸ ಮುಗಿಯದೇ ಇರುವುದಕ್ಕೆ ಕಾರಣ ಏನು ಎಂದರೆ ಈ ಸಿವೇಜ್ ಡಿಸ್ಪೋಸಲ್, ಸ್ಟಾರಮ್ ವಾಟರ್ ಡ್ರೈನ್ ಇವುಗಳು ಇಲ್ಲದೇ ಇರುವುದರಿಂದ ಅಲ್ಲಿ ಕೊಂಚ ತೊಂದರೆಗಳು ಉಂಟಾಗಿವೆ. ಪ್ರಯತ್ನಗಳು ನಡೆಯುತ್ತಿದೆ. ಒಂದು ಸ್ಥಳವನ್ನು ಲೊಕೇಟ್ ಮಾಡಿ 3 ಎಂಜಿ ಸಿವೇಜ್ ಪಂಪಿಂಗ್ ಸ್ಟೇಷನ್ ಮಾಡತಕ್ಕ ಕೆಲಸ ಫುಲ್ ಸ್ವಿಂಗ್‌ನಲ್ಲಿದೆ. ಈ ಕೆಲಸ ಕಂಪ್ಲೀಟ್ ಆದ ಮೇಲೆ ಮಾನ್ಯ ಸದಸ್ಯರು ಯಾವುದೇ ತೊಂದರೆಗಳ ಕಡೆಗೆ ನನ್ನ ಗಮನವನ್ನು ಸೆಳೆದರೆ, ಆ ತೊಂದರೆಗಳನ್ನು ನಿವಾರಣೆ ಮಾಡಲು ಸಾಧ್ಯ ಆಗುತ್ತದೆ.

ಶ್ರೀ ಅಂಜನಮೂರ್ತಿ: ಜಲ ಮಂಡಲಿಯವರು ತೆಗೆದುಕೊಂಡಿರತಕ್ಕ ಕಾಮಗಾರಿ ಕೆಲಸ ಆದಷ್ಟು ಜಾಗ್ರತೆಯಿಂದ ನಡೆಯುತ್ತಿಲ್ಲ ಬಹಳ ಆಮೆ ಗತಿಯಲ್ಲಿ ನಡೆಯುತ್ತಿದೆ. ಆದ್ದರಿಂದ ಆದಷ್ಟು ಜಾಗ್ರತೆ ಕಾಮಗಾರಿ ಕೆಲಸ ಮುಗಿಸಲು ಸೂಕ್ತ ಆದೇಶ ನೀಡಬೇಕು ಎಂದು ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಸದಸ್ಯರ ಕಾತುರತೆಯಲ್ಲಿ ನಾವೂ ಸಹ ಭಾಗಿಗಳು ಆಗಿದ್ದೇವೆ.

ಶ್ರೀ ಆರ್.ಅಶೋಕ್: ಮಾನ್ಯ ಅಧ್ಯಕ್ಷರೆ, ಈ ಪ್ರದೇಶ ಉತ್ತರಹಳ್ಳಿ ಕ್ಷೇತ್ರದ ವ್ಯಾಪ್ತಿಗೆ ಬರಲಿದ್ದು, ಪ್ರತಿ ವರ್ಷದ ಮಳೆಗಾಲದ ಸಂದರ್ಭದಲ್ಲಿ ಮಳೆ ನೀರು ಹಾಗೂ ಒಳಚರಂಡಿ ನೀರು ತಗ್ಗಿನಲ್ಲಿರುವ ಈ ಪ್ರದೇಶವನ್ನು ಆವರಿಸಿಕೊಳ್ಳುತ್ತದೆ. ಮಳೆ ನೀರನ್ನು ತಡೆಗಟ್ಟಲು ಅಡ್ಡಗಟ್ಟೆಗಳನ್ನು ಸರಿಯಾಗಿ ನಿರ್ಮಿಸಿರುವುದಿಲ್ಲ. ಮಳೆ ನೀರು ಹಾಗೂ ಒಳಚರಂಡಿ ನೀರು ಬೆರೆತು, ಆಲ್ಲದ ಪ್ರದೇಶದ ಹಿಂಭಾಗದಲ್ಲಿ ಟ್ಯಾಂಕ್ ಬಂಡ್ ಸಹ ಇರುವುದರಿಂದ ಹೆಚ್ಚು ಪ್ರಮಾಣದಲ್ಲಿ ನೀರು ತುಂಬಿಕೊಂಡು ಅಲ್ಲಿ ವಾಸಿಸುವ ಜನರಿಗೆ ಸಾಕಷ್ಟು ಅನಾನುಕೂಲವುಂಟಾಗುತ್ತಿರುವುದರಿಂದ ಸೂಕ್ತ ವ್ಯವಸ್ಥೆ ಮಾಡಬೇಕಾಗಿದೆ. ಈ ಸಮಸ್ಯೆ ಸುಮಾರು 10-12 ವರ್ಷಗಳಿಂದ ಇದ್ದು, ಇದೊಂದೇ ಪ್ರದೇಶವಲ್ಲದೆ ಕೋರಮಂಗಲ ಪ್ರದೇಶವೂ ಸಹ ಇದೇ ಸಮಸ್ಯೆಯನ್ನು

ಎದುರಿಸುತ್ತಿದೆ. ಸದರಿ ಪ್ರದೇಶಗಳು ತಗ್ಗಿನಲ್ಲಿದ್ದು ಬೆಳ್ಳಂದೂರು ಕೆರೆಯ ಎತ್ತರ ಕಡಿಮೆ ಇರುವುದರಿಂದಲೂ ಇಳಿಜಾರಿಲ್ಲದ ಕಾರಣ ನೀರು ಹೊರಗೆ ಹರಿಯುತ್ತಿಲ್ಲ. ಕೋರಮಂಗಲ, ಈಜಿಪುರ ಒಳಗೊಂಡಂತೆ 15-20 ದೊಡ್ಡ ದೊಡ್ಡ ಬಡಾವಣೆಗಳು ತಗ್ಗಿನ ಪ್ರದೇಶದಲ್ಲಿದ್ದು ಪ್ರತಿ ವರ್ಷದ ಮಳೆಗಾಲದ ಸಮಯದಲ್ಲಿ ಮುಳುಗಡೆಯಾಗಿ ತೊಂದರೆ ಅನುಭವಿಸುತ್ತಿರುವುದರಿಂದ ಸೂಕ್ತ ಕ್ರಮ ಕೈಗೊಂಡು ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಈ ಕುರಿತಂತೆ ಈಗಾಗಲೇ ಮಾನ್ಯ ಸಚಿವರು ಉತ್ತರ ಒದಗಿಸಿಕೊಟ್ಟಿದ್ದು ಇದು ಲೋ ಲೈಯಿಂಗ್ ಏರಿಯಾ ಆಗಿದ್ದು ಮಳೆಗಾಲದಲ್ಲಿ ಸದರಿ ಪ್ರದೇಶಗಳು ತೊಂದರೆಗೀಡಾಗುತ್ತಿರುವುದನ್ನು ಗಮನಿಸಿ ಈಗಾಗಲೇ ಸೂಕ್ತ ಕೆಲಸ ಕಾರ್ಯಗಳನ್ನು ಹಮ್ಮಿಕೊಂಡಿದ್ದು ಆಗುತ್ತಿರುವ ಅನಾನುಕೂಲಗಳನ್ನು ಸರಿಪಡಿಸುವುದಕ್ಕೆ ನಾವು ಪ್ರಯತ್ನಿಸುತ್ತೇವೆ.

ಕಬಿನಿ ಏತ ನೀರಾವರಿ ಸರ್ವೆ ಕಾರ್ಯದ ಪ್ರಗತಿ ಯೋಜನೆ.

339(3623)

ಶ್ರೀ ಎ.ಆರ್.ಕೃಷ್ಣಮೂರ್ತಿ(ಸಂತೇಮರಳ್ಳಿ): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಬಿನಿ ಏತ ನೀರಾವರಿ ಯೋಜನಾ ಸರ್ವೆ ಕಾರ್ಯಕ್ಕೆ ಈ ಹಿಂದೆ ಬಿಡುಗಡೆಯಾಗಿದ್ದ ರೂ.15.00 ಲಕ್ಷ ಅನುದಾನ ಸೇರಿದಂತೆ ಈವರೆಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು? ಸರ್ವೆ ಕಾರ್ಯಕ್ಕಾಗಿ ಬಿಡುಗಡೆಯಾಗಿರುವ ಅನುದಾನದಲ್ಲಿ ಈವರೆಗೆ ಖರ್ಚಾಗಿರುವ ಹಣ ಎಷ್ಟು? ಉಳಿಕೆ ಹಣ ಎಷ್ಟು? ಪೂರ್ಣವಾಗಿ ಖರ್ಚು ಮಾಡಲು ಸಾಧ್ಯವಾಗದ ಇರುವುದಕ್ಕೆ ಕಾರಣ ಸಹಿತ ವಿವರ ನೀಡುವುದು?

ಆ. ಕಬಿನಿ ಏತ ನೀರಾವರಿ ಯೋಜನೆಯ ಸರ್ವೆ ಕಾರ್ಯವು ಎಷ್ಟು ಕಿ.ಮೀ.ವರೆಗೆ ಪೂರ್ಣಗೊಂಡಿರುತ್ತದೆ? ಉಳಿಕೆ ಎಷ್ಟು ಕಿ.ಮೀ. ಸರ್ವೆ ಕಾರ್ಯವನ್ನು ಪೂರ್ಣಗೊಳಿಸಬೇಕಾಗಿರುತ್ತದೆ? ಈ ಸರ್ವೆ ಕಾರ್ಯವು ಪೂರ್ಣಗೊಳ್ಳುವುದು ಯಾವಾಗ? ಮತ್ತು ಈ ಸರ್ವೆ ಕಾರ್ಯಕ್ಕಾಗಿ ತಗಲುವ ಅಂದಾಜು ವೆಚ್ಚವೆಷ್ಟು?

ಇ. ಕಬಿನಿ ಏತ ನೀರಾವರಿ ಯೋಜನೆಗೆ ಒಳಪಡುವ ಗುಂಡ್ಲುಪೇಟೆ,